
ಸಂಕರರೂಪ' ಎಂಬ ಲೇಖನದಲ್ಲಿ ಈ ಕಲ್ಪನೆಯ ವಿವರಣೆಯಿದೆ. "ಪ್ರಬಂಧವೆನ್ನುವದು ಅಷ್ಟೇನೂ ದೀರ್ಘವಲ್ಲದ ಅನೌಪಚಾರಿಕ ಸಂವಾದವಷ್ಟೆ. ಯಾವುದರ ಬಗ್ಗೆ? ಈ ಜಗತ್ತಿನ ಯಾವುದೇ ವಸ್ತುವಿನ ಬಗ್ಗೆ. ಅದಕ್ಕೆ ಎರಡು ಉದ್ದೇಶಗಳು. ಒಂದು ವಸ್ತುವಿನಲ್ಲಿ ಆಸಕ್ತಿ ಹುಟ್ಟಿಸುವುದು. ಇನ್ನೊಂದು, ಮಾಹಿತಿ ನೀಡುವುದು. ನಮಗೆ ತುಂಬ ಸಲಿಗೆಯೆನ್ನುವಷ್ಟು ಹತ್ತಿರವಾಗಿರುವ ಈ ಪ್ರಕಾರದಲ್ಲಿ ಬರೆದವನ ಶೈಲಿ, ಅವನ ವ್ಯಕ್ತಿತ್ವದ ಪ್ರತಿಮೆ ಒಟ್ಟಿಗೇ ಪಡಿಮೂಡಿರುತ್ತವೆ" (ಪು.111). ಸಾಹಿತ್ಯ ಪ್ರಕಾರಗಳ ಅಸ್ತಿತ್ವದಲ್ಲಿ ದಿವಾಕರರಿಗೆ ನಂಬಿಗೆಯಿದೆ; ಆದರೆ ಪ್ರಬಂಧ "ಹಲವು ಪ್ರಕಾರಗಳ ಸಂಕರರೂಪವಾದರೆ ಒಳ್ಳೆಯದೆಂದೇ ನನ್ನ ಭಾವನೆ" ಎಂದೂ ಹೇಳುತ್ತಾರೆ. ಇದಕ್ಕೆ ಕಾರಣ "ಪ್ರಬಂಧವೆನ್ನುವುದು ಸರ್ವಗ್ರಾಹಿ, ಸರ್ವಧಾರಿ". ಇಂದು ಸಾಮಾನ್ಯವಾಗಿ ಎಲ್ಲ ಪ್ರಕಾರಗಳ ಬಗ್ಗೆಯೂ ಈ ಮಾತನ್ನು ಹೇಳಬಹುದು. ಆದರೆ, ಪ್ರಬಂಧ ಯಾವುದೋ ಪ್ರಕಾರದ ಗುಣಗಳನ್ನು ಭಾವತೀತಾತ್ಮಕತೆ, ನಾಟ್ಯಗುಣ, ಕಥನರೂಪ, ಇತ್ಯಾದಿ ಒಳಗೊಳ್ಳುವುದಾದರೂ ಅದರ ಮೂಲ ಜಿಜ್ಞಾಸೆಯಲ್ಲಿದೆ ಎಂದು ತೋರುತ್ತದೆ. ಇದೇ ದಿವಾಕರರ ಪ್ರಬಂಧಗಳ ಮೂಲಗುಣ. ಅವರಲ್ಲಿ ಅದಮ್ಯವಾದ ಜ್ಞಾನಪಿಪಾಸೆ ಇದೆ. ಅವರು ಅನುಭವಗಳನ್ನು ಓದಿನ ಅನುಭವವೂ ಸೇರಿದಂತೆ ಸಾಹಿತ್ಯದ, ಬೇರೆ ಬೇರೆ ಕಲೆಗಳ ಮೂಲೆ ಮೂಲೆಗಳನ್ನು ಶೋಧಿಸುವುದಕ್ಕೆ ಈ ಪ್ರಶ್ನೆಗಳೇ ಕಾರಣ. ಒಂದು ಸಂದರ್ಭದಲ್ಲಿ ಬೇಂದ್ರೆಯವರು ನಾವು ಕೇಳುವ ಪ್ರಶ್ನೆಗಳು ನಮ್ಮವೇ ಆಗಿರಬೇಕು ಎಂದು ಹೇಳಿದರು; ಎಂದರೆ ನಮ್ಮ ಸ್ವಂತದ ಅನುಭವದಲ್ಲಿ ಏಳುವ ಪ್ರಶ್ನೆಗಳಾಗಿರಬೇಕು. ದಿವಾಕರರಿಗೆ ಸ್ವಂತ ಪ್ರಶ್ನೆಗಳಿವೆ. ಆದರೆ ಅವು ಸಮುದಾಯದ ಪ್ರಶ್ನೆಗಳೂ ಆಗಿರುವುದರಿಂದ ನಮ್ಮನ್ನೂ ವಿಚಾರಕ್ಕೆಳೆಯುತ್ತವೆ; ಅವರ ಅನುಭವಕ್ಕೆ ನಮ್ಮ ನಮ್ಮ ಅನುಭವಗಳನ್ನೂ ಜೋಡಿಸಿ ನೋಡುವಂತಾಗುತ್ತವೆ. ಜಿಜ್ಞಾಸೆಯ ಪ್ರಕ್ರಿಯೆಯಲ್ಲಿ ನಾವೂ ತೊಡಗಿಸಿಕೊಳ್ಳುತ್ತೇವೆ. ಈ ಮಾತನ್ನು ಹೇಳುವ ಕಾರಣವೆಂದರೆ, ದಿವಾಕರರು ಮಾಹಿತಿಯನ್ನು (ಅದು ಎಷ್ಟೇ ಅಪರೂಪದ್ದಾಗಿದ್ದರೂ) ಕೊಡುವುದರಲ್ಲಿ, ಕುತೂಹಲವನ್ನು ತೃಪ್ತಿಗೊಳಿಸುವುದರಲ್ಲಿ, ಸಮಾಧಾನ ಕೊಡುವುದರಲ್ಲಿ ತೃಪ್ತರಾಗುವುದಿಲ್ಲ. ಯಾವುದೇ ವಿಚಾರವಿರಲಿ, ಅನುಭವವಿರಲಿ, ಸನ್ನಿವೇಶವಿರಲಿ ಅದರ ಮೂಲಕ್ಕಿಳಿದು ಅದರ ನಿಜವಾದ ಮೂಲ ಸ್ವರೂಪವನ್ನು ತೆರೆದು ತೋರಿಸುವುದು ಅವರ ಅಭೀಪ್ಸೆ. ಇದು ಅವರ ಪ್ರಬಂಧಗಳ ವಿಶಿಷ್ಟ ಗುಣ. 'ಖಾಲೀ ಕ್ಯಾನ್ವಾಸ್ ತುಂಬೀತು




ಒಂದೊಂದು ನೆನಪಿಗೂ ಒಂದೊಂದು ವಾಸನೆ
(ಪ್ರಬಂಧಗಳು)
ಲೇ: ಎಸ್. ದಿವಾಕರ್
ಪು: 184 ಬೆ: ರೂ. 150
ಪ್ರ: ಅಂಕಿತ ಪುಸ್ತಕ,
ನಂ. 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್,
ಗಾಂಧಿಬಜಾರ್ ಮುಖ್ಯರಸ್ತೆ,
ಬಸವನಗುಡಿ, ಬೆಂಗಳೂರು – 560 004